# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 696 |
| ಉತ್ತರಿಸಬೇಕಾದ ದಿನಾಂಕ | 22.02.2023 |
| ಉತ್ತರಿಸಬೇಕಾದ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜಾರಿಗೊಳಿಸುತ್ತಿರುವ ಕೇಂದ್ರ ಸರ್ಕಾರದ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) PMAY-(U) ಅಡಿ ವಸತಿ ಆಸರೆ ಕೋರಿ ಸಲ್ಲಿಸಿರುವ ಅರ್ಜಿಗಳಲ್ಲಿ ಶೇ. 80 ರಷ್ಟು ಅರ್ಜಿಗಳು ಈ ಯೋಜನೆಯಲ್ಲಿರುವ ಕ್ಲಿಷ್ಟ ನಿಬಂಧನೆಗಳಿಂದ ತಿರಸ್ಕೃತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಹಾಗಿದ್ದಲ್ಲಿ, ಜಿಲ್ಲಾವಾರು ಪೂರ್ಣ ವಿವರ ನೀಡುವುದು) | ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಭಿಯಾನದ ಮಾರ್ಗಸೂಚಿಯಲ್ಲಿ ಸರಳ ನಿಬಂಧನೆಗಳಿದ್ದು ಶೇ.80ರಷ್ಟು ಅರ್ಜಿಗಳು ನಿಬಂಧನೆಗಳ ಕಾರಣಕ್ಕಾಗಿ ತಿರಸ್ಕೃತಗೊಂಡಿರುವುದಿಲ್ಲ. ನಿಬಂಧನೆಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ರಾಜ್ಯ ಸರ್ಕಾರ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಡಿಯಲ್ಲಿ ರೂಪಿಸಲಾಗಿರುವ ಕ್ಲಿಷ್ಟ ನಿಬಂಧನೆಗಳನ್ನು ಸಡಿಲಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ; (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಇ) | ರಾಜ್ಯ ಸರ್ಕಾರ ಈ ಯೋಜನೆ ಅಡಿ ಕ್ಲಿಷ್ಟ ನಿಬಂಧನೆಗಳನ್ನು ಸರಳೀಕರಣಗೊಳಿಸಿ ತಿರಸ್ಕೃತಗೊಂಡಿರುವ ಅರ್ಜಿಗಳ ಪುನರ್ ಪರಿಶೀಲನೆ ಮಾಡುವ ಮುನ್ನಾ ಮತ್ತೊಮ್ಮೆ ಫಲಾನುಭವಿಗಳ ಆಯ್ಕೆಗೆ ಅರ್ಜಿ ಕರೆದಿರುವುದು ಸಮಂಜಸವೇ; (ಈ ಬಗ್ಗೆ ಪೂರ್ಣ ವಿವರ ನೀಡುವುದು) | ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ಯಡಿ ಮನೆ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರವು ರೂ. 1.50 ಲಕ್ಷಗಳ ಮೊತ್ತದ ಸಹಾಯಧನವನ್ನು ಒದಗಿಸುತ್ತಿದೆ. ಸದರಿ ಅಭಿಯಾನದಡಿ ಬೇಡಿಕೆಯನ್ನಾಧರಿಸಿ ಮನೆಗಳನ್ನು ಒದಗಿಸಲಾಗುತ್ತಿದ್ದು, ಯಾವುದೇ ಗರಿಷ್ಠ ಮಿತಿಯನ್ನಾಗಲಿ, ವರ್ಗವಾರು ಗುರಿಯನ್ನಾಗಲಿ ನಿಗಧಿಪಡಿಸಿರುವುದಿಲ್ಲ. ಸ್ವಂತ ನಿವೇಶನ ಹೊಂದಿರುವ ಹಾಗೂ ರೂ.1.50 ಲಕ್ಷ ಮೊತ್ತದ ಸಹಾಯಧನದಲ್ಲಿ ಮನೆ ನಿರ್ಮಿಸಿಕೊಳ್ಳಲು ಮುಂದೆ ಬರುವ ಎಲ್ಲಾ ಕುಟುಂಬಗಳಿಗೂ ವಸತಿ ಸೌಲಭ್ಯ ಒದಗಿಸಬಹುದಾಗಿದೆ.<br><br>ರೂ. 1.50 ಲಕ್ಷಗಳ ಸಹಾಯಧನದಲ್ಲಿ ನಗರ ಪ್ರದೇಶದಲ್ಲಿ ಮನೆ ನಿರ್ಮಿಸಿಕೊಳ್ಳುವುದು ಕಷ್ಟಕರವಾಗಿದ್ದರಿಂದ, ರಾಜ್ಯದಲ್ಲಿ ಪಿ.ಎಂ.ಎ.ವೈ (ಯು) ಯೋಜನೆಯನ್ನು ರಾಜ್ಯ ಪುರಸ್ಕೃತ ನಗರ ವಸತಿ ಯೋಜನೆಗಳಾದ ವಾಜಪೇಯಿ ನಗರ ವಸತಿ ಯೋಜನೆ, ಡಾ. ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ, |

| | | |
|---|---|---|
| | | ಡಿ. ದೇವರಾಜ ಅರಸು ವಿಶೇಷ ವಸತಿ ಯೋಜನೆ ಮತ್ತು ಪೌರಕಾರ್ಮಿಕ ಗೃಹ ಭಾಗ್ಯ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಎ.ಹೆಚ್.ಪಿ ಯೋಜನೆಗಳಡಿ ಫಲಾನುಭವಿಗಳು ಸಕಾಲದಲ್ಲಿ ವಂತಿಕೆ ಪಾವತಿಸುವುದು, ಬ್ಯಾಂಕ್ ಗಳಿಂದ ಸಾಲ ದೊರೆಯಬೇಕಾಗಿರುವುದು ಅವಶ್ಯಕವಾಗಿದೆ. ಸಕಾಲದಲ್ಲಿ ವಂತಿಕೆ ಪಾವತಿಸುವ, ಬ್ಯಾಂಕ್ ನಿಂದ ಸಾಲ ಸೌಲಭ್ಯ ಪಡೆಯುವ ಫಲಾನುಭವಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ಫಲಾನುಭವಿಗಳು ವಂತಿಕೆ ಪಾವತಿಸುವಲ್ಲಿ ಆಸಕ್ತಿ ತೋರದಿದ್ದಲ್ಲಿ ಅಂತಹ ಫಲಾನುಭವಿಗಳನ್ನು ಕೈಬಿಟ್ಟು ಹೊಸ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ. |
| ಈ) | ರಾಜ್ಯದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ಅನುಷ್ಠಾನದಲ್ಲಿ ಕೆಲವೊಂದು ಪಟ್ಟಣ ಪ್ರದೇಶದಲ್ಲಿ ಅವ್ಯವಹಾರ ಮತ್ತು ಅಕ್ರಮ ಎಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಪೂರ್ಣ ವಿವರ ನೀಡುವುದು) | ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರ ಮತ್ತು ಅಕ್ರಮ ಎಸಗಿರುವುದು ವರದಿ ಆಗಿರುವುದಿಲ್ಲ. |

ಸಂಖ್ಯೆ: ವಇ 37 ಹೆಚ್ಎಫ್ಎ 2023]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು

**ಅನುಬಂಧ**

**ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯೋಜನೆಯಡಿ ಒಂದು ಕುಟುಂಬವು, ಈ ಕೆಳಕಂಡ ಯಾವುದೇ ಒಂದು ಘಟಕ ಅಡಿಯಲ್ಲಿ ಮನೆಯನ್ನು ಹೊಂದಬಹುದಾಗಿದೆ.**

1. ಫಲಾನುಭವಿ ನೇತೃತ್ವದಲ್ಲಿ ಸ್ವಯಂ ಮನ ನಿರ್ಮಾಣ (BLC)
2. Affordable Housing in Partnership (AHP).
3. ಭೂಮಿಯನ್ನು ಸಂಪನ್ಮೂಲವನ್ನಾಗಿಸಿಕೊಂಡು "INSITU" ಮಾದರಿಯಲ್ಲಿ ಕೊಳಚೆ ಪ್ರದೇಶಗಳ ಪುನರ್ ಅಭಿವೃದ್ಧಿ
4. ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಯೋಜನೆ.

**ಪಿ.ಎಂ.ಎ.ವೈ (ಯು) ಮಾರ್ಗಸೂಚಿಗಳಲ್ಲಿ ಫಲಾನುಭವಿಗಳ ಆಯ್ಕೆಗೆ ಮಾನದಂಡಗಳು ಈ ಕೆಳಕಂಡಂತಿವೆ:**

1. ಒಂದು ಕುಟುಂಬವೆಂದರೆ ಗಂಡ, ಹೆಂಡತಿ ಮತ್ತು ಅವಿವಾಹಿತ ಮಕ್ಕಳು. ಕುಟುಂಬದಲ್ಲಿರುವ ವಯಸ್ಕ ಮಕ್ಕಳು (ವಿವಾಹಿತ/ಅವಿವಾಹಿತ) ಪಿಎಂ.ಎ.ವೈ (ಯು) ಅಡಿ ವಸತಿ ಸೌಲಭ್ಯ ಪಡೆಯಬಹುದಾಗಿದೆ.

2. ಫಲಾನುಭವಿಯ ಕುಟುಂಬವು ಅವನ / ಅವಳ ಹಾಗೂ ಕುಟುಂಬದ ಸದಸ್ಯರ ಹೆಸರಿನಲ್ಲಿ ದೇಶದ ಯಾವುದೇ ಭಾಗದಲ್ಲಿ ಪಕ್ಕಾ ಮನೆಯನ್ನು ಹೊಂದಿರಬಾರದು.

3. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ರೂ.3.00 ಲಕ್ಷದ ಒಳಗಿರಬೇಕು.

4. ಫಲಾನುಭವಿಯು ಈಗಾಗಲೇ 21 ಚ.ಮೀ ಗಿಂತ ಕಡಿಮೆ ವಿಸ್ತೀರ್ಣ ಇರುವ ಪಕ್ಕಾ ಮನೆಯನ್ನು ಹೊಂದಿದ್ದರೂ ಸಹ 30 ಚ.ಮೀ ವರೆಗೆ ವಿಸ್ತರಣೆ ಮಾಡಿಕೊಳ್ಳಲೂ ಸಹ ಅವಕಾಶ ಇರುತ್ತದೆ.

5. ನಿವೇಶನ ರಹಿತ ಕುಟುಂಬಗಳಿಗೆ ಎ.ಹೆಚ್.ಪಿ (Affordable Housing in Partnership) ಅಡಿ ಮನೆ ನಿರ್ಮಿಸಿ ಹಂಚಿಕೆ ಮಾಡಲಾಗುವುದು.

ಬಿ.ಎಲ್.ಸಿ ಘಟಕದಡಿ ಫಲಾನುಭವಿಗಳು ಸ್ವಂತ ನಿವೇಶನ ಹೊಂದಿರತಕ್ಕದ್ದು. ಅವರುಗಳು ತಾವೇ ಸ್ವತಃ ಮನೆಯನ್ನು ನಿರ್ಮಿಸಿಕೊಂಡಲ್ಲಿ ಸಹಾಯಧನದ ಮೊತ್ತವನ್ನು ಅವರ ಬ್ಯಾಂಕ್ ಖಾತೆಗೆ ಬಿಡುಗಡೆಗೊಳಿಸಲಾಗುವುದು. ಎ.ಎಚ್.ಪಿ ಘಟಕದಡಿ ನಿವೇಶನ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ ಒದಗಿಸಲು ಉದ್ದೇಶಿಸಿ, ಅನುಷ್ಠಾನ ಸಂಸ್ಥೆಗಳು ಜಮೀನನ್ನು ಗುರುತಿಸಿ, ಬಹುಮಹಡಿ ಮಾದರಿಯಲ್ಲಿ ಮನೆಗಳನ್ನು ನಿರ್ಮಿಸುತ್ತವೆ. ಫಲಾನುಭವಿಗಳಿಂದ ವಂತಿಕೆ ಸಂಗ್ರಹಿಸಿ (ಸ್ವಂತ ಉಳಿತಾಯ ಹಾಗೂ ಬ್ಯಾಂಕ್ ಸಾಲದ ಮೂಲಕ) ಮನೆಯನ್ನು ಹಂಚಿಕೆ ಮಾಡುತವೆ.